# ಮಂಜಿನ ಮುಸುಕು

■ ಅನು ಬೆಳ್ಳೆ
ಕಲೆ: ಸಂತೋಷ್ ಸಸಿಹಿತ್ಲು

ಅನ್‌ಮ್ಯೂಟ್ ಮಾಡುತ್ತಲೇ ಮೊಬೈಲ್ ತಡೆಯಿಲ್ಲದೆ ಮೆಸೇಜ್‌ಗಳ ಸುರಿಮಳೆಯನ್ನೇ ಹರಿಸಿತು. ಹರೀಶ್ ಗೊಂದಲಕ್ಕೊಳಗಾದ. ಯಾವುದನ್ನು ಮೊದಲು ನೋಡುವುದು, ಯಾವುದು ನಂತರವೆನ್ನುವ ಜಿಜ್ಞಾಸೆಯಿಂದ. ನಿರಂತರವಾಗಿ ಬರುತ್ತಲೇ ಇದ್ದದ್ದು ಪದ್ಮಾಳ ವಾಟ್ಸಾಪ್ ಮೆಸೇಜ್‌ಗಳು. ಮನೆಗೆ ಬಂದು ಹೋಗುವಂತೆ ಪ್ರತೀ ವೀಕೆಂಡ್‌ಗೂ ಅವಳ ಮೆಸೇಜ್.

‘ಈ ವಾರನಾದರೂ ಬಾ ಮಾರಾಯಾ. ನಿನ್ನ ನೊಡದೇ ವರ್ಷವೇ ಆಯ್ತುಲ್ವಾ?’ ಅಂತ. ಒಂದು ರೀತಿಯ ನಿರಾಶೆಯಿಂದಲೇ ಕಳುಹಿಸಿದಂತಹ ಮೆಸೇಜ್‌ಗಳು. ಹರೀಶ್ ಖಾಸಗಿ ಕಾಲೇಜೊಂದರಲ್ಲಿ ಉಪನ್ಯಾಸಕನಾಗಿ ಸೇರಿದ ಬಳಿಕ ಅವನ ತಿರುಗಾಟಗಳನ್ನೆಲ್ಲಾ ನಿಲ್ಲಿಸಿದ್ದ. ಪಾಠ ಮುಗಿಸಿ ಮನೆಗೆ ತೆರಳುವಂತಿರಲಿಲ್ಲ. ವಿದ್ಯಾರ್ಥಿಗಳ ಜೊತೆಗೆ ಸ್ವಲ್ಪ ಹೊತ್ತು ಇದ್ದು ಅವರಿಗೆ ಸಂದೇಹವಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿತ್ತು. ಕೆಲವೊಮ್ಮೆ ಮನೆಗೆ ಹಿಂತಿರುಗುವಾಗ ರಾತ್ರಿ ಹತ್ತು ಗಂಟೆಯೂ ಆಗುವುದಿತ್ತು.

ಪದ್ಮಾ ಹೇಳಿರುವುದು ಸತ್ಯ. ಅವಳನ್ನು ಭೇಟಿಯಾಗಿ ಸರಿಯಾಗಿ ಒಂದು ವರ್ಷ ಒಂದು ತಿಂಗಳು ಕಳೆದಿತ್ತು. ಈ ಬಾರಿ ಹೊಸ ವರ್ಷಕ್ಕಾದರೂ ಹೋಗಬೇಕೆಂದು ನಿರ್ಧರಿಸಿದ್ದ. ಆದರೆ ವರ್ಷಾಂತ್ಯಕ್ಕೆ ರಜೆಗಳು ಲ್ಯಾಪ್ಸ್ ಆಗುತ್ತವೆಂದು ಮೊದಲೇ ಪದ್ಮಾಳನ್ನು ಭೇಟಿಯಾಗಲು ಬೆಂಗಳೂರಿಗೆ ಹೋಗುವ ನಿರ್ಧಾರವನ್ನು ಮಾಡಿ ಬಸ್ ರಿಸರ್ವೇಶನ್ ಮಾಡಿಸಿದ್ದ. ಆದರೆ ಅದನ್ನು ಪದ್ಮಾಳಿಗೆ ತಿಳಿಸಿರಲಿಲ್ಲ. ಹೊಸ ವರ್ಷಕ್ಕೆ ಅವಳಿಗೆ ಸರ್‌ಪ್ರೈಸ್ ಕೊಡೋಣವೆಂದು ಯೋಚಿಸಿದವನೇ ಅವಳ ವಾಟ್ಸಾಪ್‌ಗೆ ಮಾಮೂಲಿನಂತೆ ‘ಈ ಬಾರಿ ಖಂಡಿತಾ ಬರುವೆ’ ಎಂದು ಮಾತ್ರ ಮೆಸೇಜಿಸಿದ. ಅದಕ್ಕೆ ಉತ್ತರವೆಂಬಂತೆ, ‘ನ್ಯೂ ಇಯರ್ ಇಲ್ಲಿಯೇ ಆಚರಿಸೋಣ, ಮರಿಬೇಡ’ ಎಂದು ಮರು ಮೆಸೇಜ್ ರವಾನಿಸಿದ್ದಳು ಪದ್ಮಾ.

ಪ್ರತಿಬಾರಿಯೂ ಇಂದಿರಾನಗರದ ಅವರ ಅಪಾರ್ಟ್‌ಮೆಂಟ್‌ನಲ್ಲಿ ನಡೆಯುವ ನ್ಯೂ ಇಯರ್ ಪಾರ್ಟಿಯ ಬಗ್ಗೆ ವಿಶೇಷ ವರದಿಯನ್ನು ಮಾಡುವಂತೆ ಹರೀಶ್‌ಗೆ ಫೋನ್ ಮಾಡಿ ಪದ್ಮಾ ತಿಳಿಸಿದ್ದಳು. ಹರೀಶ್‌ನಿಗೆ ನ್ಯೂ ಇಯರ್‌ಗಿಂತಲೂ ಪದ್ಮಾ ಅದೇನೊ ಕುತೂಹಲವೇನನ್ನೋ ತೋರಿಸುವುದಾಗಿ ಹೇಳಿದ್ದೇ ಅವನಲ್ಲೂ ಕುತೂಹಲ ಹುಟ್ಟಿತು. ಇದ್ದ ಸಿಎಲ್‌ಗಳನ್ನು ಮುಗಿಸದಿದ್ದರೆ ಅವೆಲ್ಲಾ ವ್ಯರ್ಥವಾಗುವುದೆಂದು ಅವನು ಇಯರ್ ಎಂಡ್‌ಗೆ ಅವೆಲ್ಲವನ್ನೂ ಖಾಲಿ ಮಾಡುವ ಉದ್ದೇಶದಿಂದ ರಜೆ ನೀಡಿದ್ದ. ನಾಲ್ಕು ದಿನಗಳಿಗಿಂತ ಜಾಸ್ತಿ ಸಿಎಲ್ ಆಗುವುದಿಲ್ಲವೆಂದು ಮ್ಯಾನೇಜರ್ ಗೊಣಗಿದ್ದರೂ ಅವನ ಕಾರ್ಯವೈಖರಿಯ ದೃಷ್ಟಿಯಿಂದ ಸ್ವತಃ ಪ್ರಾಂಶುಪಾಲರೇ ರಜೆ ಸ್ಯಾಂಕ್ಷನ್ ಮಾಡುವಂತೆ ಮ್ಯಾನೇಜರ್‌ಗೆ ಹೇಳಿದ್ದರು.

ಡಿಸೆಂಬರ್ ಮೂವತ್ತೊಂದರಂದು ಬಸ್ ಹಿಡಿದು ಕೊರೆಯುವ ಚಳಿಯಲ್ಲಿ ಮೆಜೆಸ್ಟಿಕ್‌ನಲ್ಲಿ ಇಳಿದ. ಅಲ್ಲಿಂದ ಮೆಟ್ರೋ ಹಿಡಿದು ಇಂದಿರಾನಗರಕ್ಕೆ ಹೋಗುವವರೆಗೂ ಪದ್ಮಾಳಿಗೆ ಹೇಳಿರಲಿಲ್ಲ. ಪದ್ಮಾ ಆತನ ಫೋನ್ ಬರುವವರೆಗೂ ಅವನು ಖಂಡಿತವಾಗಿಯೂ ಬರುವನೆಂದು ನಿರೀಕ್ಷಿಸಿಯೇ ಇರಲಿಲ್ಲ. ಅವನ ಫೋನ್ ಕರೆ ಬಂದ ತಕ್ಷಣವೇ ಸ್ಕೂಟರ್ ಹೊರಗೆತೆಗೆದು ಮೆಟ್ರೋ ಕಡೆಗೆ ಅವನನ್ನು ಕರೆತರಲು ಸಂಭ್ರಮದಿಂದ ಹೊರಟಳು. ಮೆಟ್ರೋ ಇಳಿದು ಆಟೊಸ್ಟಾಂಡ್‌ಗೆ ನಡೆದಾಗ ಪದ್ಮಾ ಚಳಿಯ ಕೋಟು ಧರಿಸಿ ನಿಂತಿದ್ದಳು. ಪಕ್ಕನೆ ಹರೀಶ್‌ಗೆ ಆಕೆಯನ್ನು ಗುರುತಿಸಲಾಗಲಿಲ್ಲ. ಅವಳೇ ಗುರುತು ಹಿಡಿದು, ‘ಬನ್ನಿ ಮೇಷ್ಟ್ರೇ’ ಎಂದು ಮುತುವರ್ಜಿಯಿಂದ ಅವನ ಹೆಗಲಲ್ಲಿನ ಬ್ಯಾಗ್ ತೆಗೆದುಕೊಂಡು ಸ್ಕೂಟರಲ್ಲಿಟ್ಟಳು. ಹರೀಶ್‌ಗೂ ಅವಳನ್ನು ನೋಡಿ ಆಶ್ಚರ್ಯವಾಯಿತು. ಒಂದು ವರ್ಷದಲ್ಲಿ ಅದೆಷ್ಟು ಬದಲಾಗಿದ್ದಳು. ಮುಖದಲ್ಲಿ ಹೊಸ ಕಳೆಯೊಂದು ತುಂಬಿಕೊಂಡಿತ್ತು. ಹರೀಶ್ ಮಾತಾಡದೆ ಅವಳ ಹಿಂದೆ ಕುಳಿತ. ಅವನ ಭಾರವನ್ನೂ ತೂಗಿಸಿಕೊಂಡು ಪದ್ಮಾ ಸ್ಕೂಟರನ್ನು ಅಪಾರ್ಟ್‌ಮೆಂಟ್‌ನತ್ತ ಓಡಿಸಿದಳು.

ಹಿಂದಿನ ಸಾರಿ ಬಂದಾಗ ಇದ್ದಂತೆ ಅಪಾರ್ಟ್‌ಮೆಂಟ್ ಇರಲಿಲ್ಲ. ಬಹಳಷ್ಟು ಬದಲಾವಣೆಗಳು ಆಗಿದ್ದವು. ಜೊತೆಗೆ ನ್ಯೂ ಇಯರ್‌ಗೆ ಅಲಂಕಾರಗೊಂಡು ಪಾರ್ಟಿಗೆ ಸಜ್ಜಾದಂತೆ ಇತ್ತು. ಪದ್ಮಾ ಉತ್ಸಾಹದಿಂದ ಅವನ ಬ್ಯಾಗ್ ಹಿಡಿದುಕೊಂಡು ಮೆಟ್ಟಲೇರಿದಳು. ಅವಳ ಫ್ಲ್ಯಾಟ್ ಇದ್ದಿದ್ದು ಒಂದನೇ ಅಂತಸ್ತಿನಲ್ಲಿ. ಹರೀಶ್ ಅವಳನ್ನು ಹಿಂಬಾಲಿಸಿ ಮೆಟ್ಟಿಲೇರಿದ. ಮನೆಯ ಒಳಗೆ ಕೂಡ ಎಲ್ಲವನ್ನೂ ಸುಸಜ್ಜಿತವಾಗಿ ಜೋಡಿಸಲಾಗಿತ್ತು. ಹರೀಶ್ ಅವನ್ನೆಲ್ಲಾ ನೋಡುತ್ತಾ ತನ್ನ ಕಣ್ಣುಗಳಿಂದಲೇ ಅವಳ ಅಭಿರುಚಿಯನ್ನು ಮೆಚ್ಚಿ ಸಂತಸ ವ್ಯಕ್ತಪಡಿಸಿದ.

‘ಹರಿ, ಕೂತಿರು ಬಂದೆ’ ಎಂದು ಒಳಗೆ ಹೋದವಳೇ ಕೈಯಲ್ಲಿ ಟವೆಲ್ ತಂದು ಆತನ ಕೈಗೆ ಇಡುತ್ತಾ, ‘ಫ್ರೆಶ್ ಆಗಿ ಬಾ’ ಎಂದು ಲವಲವಿಕೆಯಿಂದಲೇ ಕಿಚನ್‌ಗೆ ನಡೆದಳು. ಹರೀಶ್ ಬಾತ್ ರೂಂನಿಂದ ಹೊರಗೆ ಬರುವಷ್ಟರಲ್ಲಿ ಕೂರ್ಗ್ ಕಾಫಿ ತಂದು ಅವನ ಕೈಯಲ್ಲಿಟ್ಟಳು.

‘ಈ ವರ್ಷ ಬೆಂಗಳೂರಿನಲ್ಲಿ ಚಳಿ ಜೋರಿದೆ

